# ಭ್ರಷ್ಟ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ

**ಬೆಂಗಳೂರು,ನ. 25–**ಬೆಂಗಳೂರು, ಮಂಡ್ಯ,ಶಿವಮೊಗ್ಗ, ಮೈಸೂರು, ಬೀದರ್, ದಾವಣಗೆರೆ ಹಾವೇರಿ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಏಕಕಾಲದ ದಾಳಿ ಲೋಕಾಯುಕ್ತ ಅಧಿಕಾರಿಗಳು 10 ಮಂದಿ ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಕೆಡವಿ ಕೋಟ್ಯಂತರ ಮೌಲ್ಯದ ಅಕ್ರಮ ಆಸ್ತಿ ಪಾಸ್ತಿ ಚಿನ್ನಾಭರಣ, ನಗದು ಪತ್ತೆಹಚ್ಚಿದ್ದಾರೆ.

ನಗರದ ಆರ್ ಟಿಓ ಸೂಪರಿಂಟೆಂಡೆಂಟ್ ಕುಮಾರಸ್ವಾಮಿ, ಮಂಡ್ಯ ನಗರ ಪಾಲಿಕೆ ಸಿಎಓ ಪುಟ್ಟಸ್ವಾಮಿ, ಬೀದರ್ ಕೃಷ್ಣಾ ಮೇಲ್ದಂಡೆ ಯೋಜನೆಯ ಇಂಜಿನಿಯರ್ ಪ್ರೇಮ್ ಸಿಂಗ್ , ಮೈಸೂರು □ ಮಡಿಕೇರಿ ವಿಭಾಗದ ಸಹಾಯಕ ಇಂಜಿನಿಯರ್ ಗಿರೀಶ್ ಡಿ.ಎಂ,ಹಾವೇರಿಯ ಯೋಜನಾ ನಿರ್ದೇಶಕ ಕಚೇರಿಯ ಕಾರ್ಯಪಾಲಕ ಇಂಜಿನಿಯರ್

ಶೇಕಪ್ಪ ಸೇರಿ 11 ಅಧಿಕಾರಿಗಳ ಕಚೇರಿ ಮನೆಗಳು ಸಂಬಂಧಿಕರ ಮನೆಗಳ ಮೇಲೆ ದಾಳಿ ನಡೆಸಿ ಅಕ್ರಮ ಆಸ್ತಿಪಾಸ್ತಿಗಳ ಪತ್ತೆ ಕಾರ್ಯಾ ಕೈಗೊಳ್ಳಲಾಗಿದೆ.

ಬೀದರ್‌ನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಮುಖ್ಯ ಇಂಜಿನಿಯರ್ ಪ್ರೇಮ್‌ಸಿಂಗ್ ರಾಥೋಡ್ ಮನೆ ಮೇಲೆ ಲೋಕಾಯುಕ್ತ ಡಿವೈಎಸ್‌ಪಿ ಹನುಮಂತರಾಯ್ ನೇತೃತ್ವದಲ್ಲಿ ದಾಳಿ ದಾಖಲೆ ಪರಿಶೀಲನೆ ನಡೆಸಲಾಗುತ್ತಿದೆ.

ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಭೀಮರಾಯನ ಗುಡಿಯ ನಿವಾಸ ಮತ್ತು ಕಚೇರಿ ಮೇಲೆ ದಾಳಿ ನಡೆಸಲಾಗಿದೆ. ಅಕ್ರಮ ಆಸ್ತಿ ಗಳಿಕೆ ಆರೋಪ ಹಿನ್ನಲೆ ಶಿವಮೊಗ್ಗ ಮೆಡಿಕಲ್ ಕಾಲೇಜು ಡೀನ್ ಸ್ಟೇನೋ ಮನೆ ಮೇಲೆ ಲೋಕಾಯುಕ್ತ ಎಸ್‌ಪಿ ಮಂಜುನಾಥ್ ಚೌಧರಿ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಕೊಡಗಿನಲ್ಲಿ ಲೋಕೋಪಯೋಗಿ ಎಂಜಿನಿಯರ್ ಗಿರೀಶ್ ಕಚೇರಿ, ಮನೆಗಳ ಮೇಲೆ ಲೋಕಾಯುಕ್ತ ಡಿವೈಎಸ್ ಪಿ ದಿನಕರ್ ಶೆಟ್ಟಿ ನೇತೃತ್ವದಲ್ಲಿ ಮೈಸೂರಿನಲ್ಲಿ ದಾಳಿ ನಡೆಸಿದ್ದರೆ, ಮಡಿಕೇರಿಯಲ್ಲಿ ಲೋಕಾಯುಕ್ತ ಸಬ್ ಇನ್ಸ್‌ಪೆಕ್ಟರ್ ವೀಣಾ ನಾಯ್ಕ್ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ.

ದಾವಣಗೆರೆ ಎಪಿಎಂಸಿ ಸಹಾಯಕ ನಿರ್ದೇಶಕ ಪ್ರಭು ನಿವಾಸ, ಕಚೇರಿ, ಸಂಬಂಧಿಕರ ಮನೆ ಮೇಲೆ ಲೋಕಾಯುಕ್ತ ಎಸ್ ಪಿ ಎಂ.ಎಸ್.ಕೌಲಾಪೂರೆ ನೇತೃತ್ವದಲ್ಲಿ ದಾಳಿ ನಡೆಸಿದೆ. ಹಾವೇರಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಇಂಜಿನಿಯರ್ ಶೇಖಪ್ಪ ಸಣ್ಣಪ್ಪ ಮತ್ತಿಕಟ್ಟಿ ನಿವಾಸದ ಮೇಲೆ ಲೋಕಾ ದಾಳಿ ನಡೆದಿದೆ.

ಧಾರವಾಡದಲ್ಲಿ ಪ್ರೊ.ಸುಭಾಷ್ಚಂದ್ರ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ಮೈಸೂರಿನಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ರಾಮಸ್ವಾಮಿ ಮನೆಯಲ್ಲಿ ಲೋಕಾಯುಕ್ತ ಪೊಲೀಸರಿಂದ ಪರಿಶೀಲನೆ ನಡೆಯುತ್ತಿದೆ. ಮಂಡ್ಯದಲ್ಲೂ ಏಕಕಾಲಕ್ಕೆ 5 ಕಡೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಪುಟ್ಟಸ್ವಾಮಿ ಮನೆ ಮೇಲೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

**ನಾಟೀಕರ್‌ಗೆ ಶಾಕ್**–ದಾವಣಗೆರೆಯ ಎಪಿಎಂಸಿ ಕೃಷಿ ಮಾರಾಟ ವಿಭಾಗದ ಉಪ ನಿರ್ದೇಶಕ, ಪ್ರಭು ಅವರ ನಿವಾಸದ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಪತ್ತೆಯಾದ ನಗದು ಮತ್ತು ಚಿನ್ನ.

ಧಾರವಾಡದ ಕವಿವಿ ಅಂಬೇಡ್ಕರ್ ಸ್ಟಡೀಸ್ ಸಂಯೋಜಕ



ನಾಟೀಕರ್ ಅವರ ಯಾಲಕ್ಕಿ ಶೆಟ್ಟರ್ ಕಾಲನಿಯಲ್ಲಿನ ಮನೆ, ಕವಿವಿ ಸಮಾಜಶಾಸ್ತ್ರ ವಿಭಾಗ, ಅಂಬೇಡ್ಕರ್ ಸ್ಟಡೀಸ್, ಕೊಪ್ಪಳದಲ್ಲಿಯ ಮನೆ, ವಿಜಯಪುರ ಜಿಲ್ಲೆಯ ತಾಳಿಕೋಟೆಯ ಸ್ವಂತ ಮನೆಯ ಮೇಲೆ ದಾಳಿ ನಡೆದಿದೆ. ನಾಟೀಕರ್ ಇಂದು ಮೌಲ್ಯಮಾಪನ ಕುಲಸಚಿವರಾಗಿ ಅಧಿಕಾರ ವಹಿಸಿಕೊಳ್ಳಬೇಕಿತ್ತು. ಆದರೆ ಅಕ್ರಮ ಆಸ್ತಿ ಗಳಿಕೆ ಹಿನ್ನಲೆ ಬೆಳಿಗ್ಗೆ ನಾಟೀಕರ್ ಮನೆ ಮತ್ತು ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಶಾಕ್ ನೀಡಿದ್ದಾರೆ.

**ಬಲೆಗೆ ಬಿದ್ದವರು**–ಕುಮಾರಸ್ವಾಮಿ ಸೂಪರಿಂಟೆಂಡೆಂಟ್ ಆರ್ ಟಿಓ ಇಲಾಖೆ ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು, ಪುಟ್ಟಸ್ವಾಮಿ, ಸಿಎಓ ನಗರ ಪಾಲಿಕೆ ಮಂಡ್ಯ, ಪ್ರೇಮ್ ಸಿಂಗ್ ಮುಖ್ಯ ಇಂಜಿನಿಯರ್, ಕೃಷ್ಣಾ ಮೇಲ್ದಂಡೆ ಯೋಜನೆ ಬೀದರ್, ರಾಮಸ್ವಾಮಿ.ಸಿ ರೆವಿನ್ಯೂ ಇನ್ಸ್‌ಪೆಕ್ಟರ್ ಹೂಟಗಳ್ಳಿ ನಗರ ಪಾಲಿಕೆ ಮೈಸೂರು, ಸುಭಾಶ್ ಚಂದ್ರ ಸಹ ಪ್ರಾಧ್ಯಾಪಕ ಕರ್ನಾಟಕ ವಿವಿ ಧಾರವಾಡ, ಸತೀಶ್ ಹಿರಿಯ ಪರೀಕ್ಷಕ ಪ್ರಾ.ಪಶು ಕ್ಲಿನಿಕ್ ಹುಲಿಗೋಲ್, ಲಕ್ಷ್ಮೀಪತಿ ಸಿ.ಎನ್ ಎಫ್‌ಡಿಎಎಸ್ ಐಎಂಎಸ್ ಮೆಡಿಕಲ್ ಕಾಲೇಜು ಶಿವಮೊಗ್ಗ, ಪ್ರಭು ಜೆ.ಸಹ ನಿರ್ದೇಶಕ ಎಪಿಎಂಸಿ ದಾವಣಗೆರೆ,ಗಿರೀಶ್ ಡಿ.ಎಂ ಸಹಾಯಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಮೈಸೂರು ಮಡಿಕೇರಿ, ಶೇಕಪ್ಪ ಕಾರ್ಯಪಾಲಕ ಇಂಜಿನಿಯರ್ ಯೋಜನಾ ನಿರ್ದೇಶಕ ಕಚೇರಿ ಹಾವೇರಿ

# ಆತ್ಮಸಾಕ್ಷಿಗೆ ತಕ್ಕಂತೆ ನಾವೆಲ್ಲ ನಡೆದುಕೊಳ್ಳಬೇಕು



**ಬೆಂಗಳೂರು,ನ. 25–** ಮುಖ್ಯಮಂತ್ರಿ ಕುರ್ಚಿ ಬಗ್ಗೆ ನಾನು ಬಹಿರಂಗವಾಗಿ ಏನೂ ಮಾತನಾಡಲ್ಲ. ಆತ್ಮಸಾಕ್ಷಿಗೆ ಅನುಗುಣವಾಗಿ ನಾವೆಲ್ಲಾ ನಡೆದುಕೊಳ್ಳಬೇಕು, ಕೆಲಸ ಮಾಡಬೇಕು. ಪಕ್ಷವನ್ನು ಬಲಹೀನಗೊಳಿಸುವ ಅಥವಾ ಪಕ್ಷಕ್ಕೆ ಮುಜುಗರ ತರುವ ಕೆಲಸ ಮಾಡಲ್ಲ. ಪಕ್ಷ ಇದ್ದರೆ ನಾವು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕನಕಪುರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೋ ಗೊತ್ತಿಲ್ಲ ಏನೇ ಇರಲಿ ಆತ್ಮಸಾಕ್ಷಿ ದೊಡ್ಡದು ಎಂದು ಮಾರ್ಮಿ ಕವಾಗಿ ಹೇಳಿದರು. ಮುಖ್ಯಮಂತ್ರಿ ಸಿದ್ಧರಾಮಯ್ಯ ನಮ್ಮ ಪಕ್ಷಕ್ಕೆ ದೊಡ್ಡ ಆಸ್ತಿ. ಅವರು ಈಗಾಗಲೇ ಎರಡೂವರೆ ವರ್ಷ ಅಧಿಕಾರ ನಡೆಸಿದ್ದಾರೆ.

ಮತ್ತೊಂದು ಬಜೆಟ್ ಮಂಡಿಸುವುದಾಗಿಯೂ ಹೇಳಿದ್ದಾರೆ ಮಂಡಿಸಲಿ ಎಂದರು. ಅಂತಿಮವಾಗಿ ಹೈಕಮಾಂಡ್ ಎಲ್ಲವನ್ನು ತೀರ್ಮಾನಿಸುತ್ತದೆ. ನಾನು ಬಹಿರಂಗವಾಗಿ ಸಿಎಂ ಸ್ಥಾನದ ಬಗ್ಗೆ ಮಾತನಾಡಲ್ಲ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಕೆಲ ಶಾಸಕರು ನಿಮ್ಮ ಪರ ದೆಹಲಿಗೆ ಹೋಗಿದ್ದಾ ರಲ್ಲಾ ಎಂಬ ಪ್ರಶ್ನೆಗೆ ಅದು ನನಗೆ ಗೊತ್ತಿಲ್ಲ. ನಾನು ಯಾರ ಜತೆಯೂ ಮಾತನಾಡಿಲ್ಲ.

ಸಚಿವ ಸ್ಥಾನಕ್ಕೆ ಅವರೆಲ್ಲಾ ದೆಹಲಿಗೆ ಹೋಗಿರಬಹುದು. ನಾನಂತೂ ದೆಹಲಿಗೆ ಹೋಗಿರುವ ಶಾಸಕರುಗಳ ಜತೆ ಮಾತನಾಡಿಲ್ಲ ಎಂದರು.

ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಎಂದು ಕಾರ್ಯಕರ್ತರು ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಾನು ಹಿಂದೆ ಜೈಲಿನಲ್ಲಿದ್ದಾಗ ಜೈಲಿನಿಂದ ಬಿಡುಗಡ 'ಯಾಗಲಿ ಎಂದು ತಾಯಂದಿರು, ಅಣ್ಣ–ತಮ್ಮಂದಿರು, ಕಾರ್ಯಕರ್ತರು, ನನ್ನ ಅಭಿಮಾನಿಗಳು, ಅರ್ಚಕರು ದೇವಾಲಯಗಳಲ್ಲಿ ಪೂಜೆ ಸಲ್ಲಿಸಿ ಹರಕೆ ಹೊತ್ತಿದ್ದರು. ಅದು ದೊಡ್ಡದು. ಈಗ ನಾನು ಡಿಸಿಎಂ ಆಗಿದ್ದೇನೆ. ಪಕ್ಷದ ಅಧ್ಯಕ್ಷನೂ ಆಗಿದ್ದೇನೆ.ಹಾಗಾಗಿ ಎಲ್ಲ ಮಾಡುತ್ತಾರೆ.

ಆದರೆ ಜೈಲಿನಲ್ಲಿದ್ದಾಗ ದೆಹಲಿಗೆ ಬಂದು ನನ್ನನ್ನು ಭೇಟಿ ಮಾಡಿ ಧೈರ್ಯ ತುಂಬಿದ್ದರಲ್ಲಾ ಅದನ್ನು ನಾನು ಯಾವತ್ತೂ ಮರೆಯಲ್ಲ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

# ತೋಟದ ಮನೆಗೆ ವಿದ್ಯುತ್ ಸಂಪರ್ಕ



**ಕಾಳಗಿ:ನ.25–** ತಾಲೂಕಿನ ಕೋಡ್ಲಿ ಗ್ರಾಮದ ತೋಟದ ಮನೆಗೆ ಸರ್ಕಾರದ ಆದೇಶದಂತೆ ತೋಟದ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಕೊಡಲಾಯಿತು. ಜೆಸ್ಕಾಂ ಅಧಿಕಾರಿ ಸಹಾಯಕ ಕಾರ್ಯನಿರಂತರ ಅಭಿಯಂತರರು ಇಲಿಯಾಸ ಅಹಮದ್ ರವರು ನೀಡಿದರು.

ಈ ಸಂದರ್ಭದಲ್ಲಿ, ಮಡಿವಾಳ ಸಹಾಯಕ ಇಂಜಿನಿಯರ, ವೀರಣ್ಣ ಗಂಗಾಣಿ, ಸಂಗಾರೆಡ್ಡಿ ಅಂತರೆಡ್ಡಿ, ಶಿವಲಿಂಗಪ್ಪ ಸುಲೇಪೇಠ, ರಾಜಪ್ಪ ಗಂಜಗೂಡ, ರೇವಣಸಿದ್ದಪ್ಪ ಚಿದ್ರಿ, ಸಚಿನ ಮರಾಠ, ಸುಬ್ಬಣ್ಣ ಬೇಡರ, ಗುರಪ್ಪ ಚಿಂತಪಳ್ಳಿ, ಮೌನೇಶ ಮರಾಠ, ಪವರ್ ಮ್ಯಾನ್ ಗಳಾದ ರಮೇಶ ರಟಕಲ್, ಸಿದ್ದರಾಮ, ಚಂದ್ರು, ನೀಲಕಂಠ ಸೇರಿದಂತೆ ಅನೇಕರಿದ್ದರು.

# ಪ್ರಿಯಾಂಕ್ ಖರ್ಗೆ ಜನ್ಮದಿನ, 37 ಜನರಿಗೆ ಮೊದಲ ಹಂತದಲ್ಲಿ ಶಸ್ತ್ರ ಚಿಕಿತ್ಸೆ ಯಶಸ್ವಿ : ಅರುಣಕುಮಾರ ಪಾಟೀಲ

**ಕಲಬುರಗಿ ;ನ.25–** ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ 47ನೇ ಜನ್ಮದಿನ ನಿಮಿತ್ಯ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಂಡ ಮೊದಲನೇ ಹಂತದಲ್ಲಿ 37 ಜನರಿಗೆ ಹೆಚ್ಕೆಇ ಶಿಕ್ಷಣ ಮಂಡಳಿ ಸಹಯೋಗದಲ್ಲಿ ಬಸವೇಶ್ವರ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೇರವೇರಲಾಯಿತು ಎಂದು ಕೆಕೆಆರ್ಟಿಸಿ ಅಧ್ಯಕ್ಷ ಹಾಗೂ ಹೆಚ್ಕೆಇ ಶಿಕ್ಷಣ ಮಂಡಳಿ ನಿರ್ದೇಶಕರಾದ ಅರುಣಕುಮಾರ ಎಂ. ವೈ.ಪಾಟೀಲ ಹೇಳಿದರು.

ಇತ್ತೀಚೆಗೆ ಅಫಜಲಪುರ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಜನ್ಮದಿನ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಶಿಬಿರ ಜರುಗಿದ ಹಿನ್ನಲೆ ಒಟ್ಟು 426 ಸಾರ್ವಜನಿಕರು ತಪಾಸಣೆ ಮಾಡಿಸಿದ್ದು, 116 ಜನರಿಗೆ ಶಸ್ತ್ರ ಚಿಕೆತ್ಸೆ ಅವಶ್ಯಕತೆವಿದೆ ಎಂದು ವೈದ್ಯರು ಹೇಳಿದರು. ವೈದ್ಯರ ಸಲಹೆ ಮೇರೆಗೆ 3 ಹಂತದಲ್ಲಿ ಶಸ್ತ್ರ ಚಿಕಿತ್ಸೆ ನೀಡಲು ಬಸವೇಶ್ವರ ಆಸ್ಪತ್ರೆಯ ವೈದ್ಯರು ನಿರ್ಧಾರ ಮಾಡಿದ್ದಾರೆ ಎಂದು ಪಾಟೀಲ ಮಾಹಿತಿ ನೀಡಿದರು.

ಮೊದಲನೆಯ ಹಂತದ ಶಸ್ತ್ರಚಿಕಿತ್ಸೆ ಇಂದು ಸುಮಾರು 37 ಜನರಿಗೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನೇರನೇರಿಸಿದ ನುರಿತ ವೈದ್ಯರ ತಂಡಕ್ಕೆ ಅಭಿನಂದನೆಗಳು ತಿಳಿಸಿದರು. ಇನ್ನೂ ಎರಡು ಹಂತದಲ್ಲಿ ಇನ್ನುಳಿದವರಿಗೂ ಆದಷ್ಟು ಬೇಗ ಶಸ್ತ್ರಚಿಕಿತ್ಸೆ ಮೂಲಕ ಅವರ ಸುರಕ್ಷಿತವಾಗಿ ತಮ್ಮನೆಗೆ ತೆರಳುವ ಎಲ್ಲಾ ವ್ಯವಸ್ಥೆ ಶ್ರೀ ಬಸವೇಶ್ವರ ಆಸ್ಪತ್ರೆಯ ವತಿಯಿಂದ ನೇರವೇರಿಸಲಾಗುವುದು ಎಂದು ಅರುಣಕುಮಾರ ಪಾಟೀಲ ತಿಳಿಸಿದರು.

ಆಡಳಿತ ಮಂಡಳಿಯ ಸದಸ್ಯರಾದ ಡಾ. ಕಿರಣ್ ದೇಶಮುಖ, ಡಾ ಶರಣಬಸಪ್ಪ ಹರವಾಳ, ನಾಗಣ್ಣ ಘಂಟಿ, ಅನಿಲ್ ಮಾರಗೊಳ, ಸಾಯಿನಾಥ ಪಾಟೀಲ, ಡಾ. ಗುರು ಪಾಟೀಲ ನೇತ್ರ ವಿಭಾಗದ ಮುಖ್ಯಸ್ಥ ಡಾ. ಸುಮಿತ್ ದೇಶಪಾಂಡೆ, ಶ್ರೀಮತಿ ನಾಗವೇಣಿ ಗುಬ್ಬೇವಾಡ ಎಂ.ಆರ್.ಎಂ.ಸಿ ಶರಣಗೌಡ ಪಾಟೀಲ, ಡಾ. ಮಲ್ಲಿಕಾರ್ಜುನ ತೆಗನೂರ, ಯುವ ಕಾಂಗ್ರೆಸ್ ಅಧ್ಯಕ್ಷ ಅಣ್ಣವೀರ ಮಠಪತಿ, ಪ್ರವೀಣ್ ಕಲ್ಲೂರ ಉಪಸ್ಥಿತರಿದ್ದರು

ಸಚಿವ ಪ್ರಿಯಾಂಕ್ ಖರ್ಗೆ ಅವರ ಜನ್ಮದಿನದ ಅಂಗವಾಗಿ ಸಮಾಜಮುಖಿ ಕಾರ್ಯ ಮಾಡುವ ಮೂಲಕ ನೂರಾರು ಬಡ ಜನರಿಗೆ ಬೆಳಕಾಗುವ ಮಹತ್ವದ ಕಾರ್ಯ ಅರುಣಕುಮಾರ ಪಾಟೀಲ ಮಾಡಿದ್ದಾರೆ. ಮುಂದೆಯೂ ಹಿಗೇ ಅವರ ಬಡ ಜನರ ಸೇವೆ ಅವರ ನೇತೃತ್ವದಲ್ಲಿ ನಡೆಯಲಿ ಎಂದು ಅವರು ಮಾಡುತ್ತಿರುವ ಕಾರ್ಯ ಶ್ಲಾಘನೀಯ.



# ನ.28 ರಿಂದ ಬಳ್ಳಾರಿಯಲ್ಲಿ ಜೀಪ್ ಸಾಹಸ ಸ್ಪರ್ಧೆಗಳು

**ಬಳ್ಳಾರಿ, ನ.25–** ಇಲ್ಲಿನ ಬಳ್ಳಾರಿಯ ಕೆ ಎ 34 ಆಫ್ ರೋಡ್ ಚಾಲೆಂಜ್ ಸಂಸ್ಥೆಯು ಮೊಟ್ಟ ಮೊದಲಬಾರಿಗೆ ಬಳ್ಳಾರಿಯಲ್ಲಿ ನಾಲ್ಕು ಚಕ್ರ ವಾಹನಗಳ ಸಹಾಸಮಯ ಸ್ಪರ್ಧೆಗಳನ್ನು ನ.28 ರಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿದೆ.

ಸಂಸ್ಥೆಯು ಕಾರ್ಯದರ್ಶಿ ಎನೋಪ್ ಕೇನಿತ್ ವರ್ಮ ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ, ನ.29 ರಂದು ಬೆಳಿಗ್ಗೆ 8 ಗಂಟೆಗೆ ಪೋಲಾ ಪ್ಯಾರಡೈಸ್ ಹೊಟೇಲ್ ನಿಂದ ಶಾಸಕ ಬಿ.ನಾಗೇಂದ್ರ ಅವರಿಂದ ಉದ್ಘಾಟನೆಯಾಗಲಿದೆ.

ರಾಜ್ಯದ ಹಾಗು ಹೊರ ರಾಜ್ಯದ ಮಹಿಳೆಯರೂ ಸೇರಿದಂತೆ 35 ಜನ ಮಹಾರಾಷ್ಟದ ಸತಾರಾ, ಪುಣೆ, ಕರ್ನಾಟಕದ ವಿಜಯಪುರ, ಕಲ್ಬುರ್ಗಿ, ಹಾಸನ್, ನರಸಿಂಹರಾಜಪುರ, ಶಿವಮೊಗ್ಗ, ಬೆಂಗಳೂರು, ಮಡಿಕೇರಿ, ಸುರಪುರ, ಹಾಗೂ ಗೋವಾ, ಕೇರಳದಿಂದ ಸ್ಪರ್ಧಿಗಳಿ ಭಾಗವಹಿಸಲು ಬರುತ್ತಿದ್ದಾರೆ

ಈ ಸ್ಪರ್ಧೆಗಳು ಬಳ್ಳಾರಿ ತಾಲೂಕಿನ ಜಾನೆ ಕುಂಟೆ ಪ್ರದೇಶದ ಜಮೀನಿನಲ್ಲಿ ಸ್ಪರ್ಧೆಗಳು 4 ವಿಭಾಗಗಳಲ್ಲಿ ಆಯೋಜಿಸಿಲಾಗುತ್ತಿದೆ ಮೋಡಿಫೈಡ್ ಪೆಟ್ರೋಲ್/ಡೀಸೆಲ್ ವಾಹನಗಳು, ಎಕ್ಸ್‌ಟ್ರ್



ಪೆಟ್ರೋಲ್/ಡೀಸಲ್, ಥಾರ್ 2020/ಜಿಮ್ಮಿ ಹಾಗೂ ಮಹಿಳೆಯರ ವಿಭಾಗವು ಸೇರಿರುತ್ತದೆ.ಯಾವ ಸ್ಪರ್ಧಾರ್ಥಿಗಳು ಅವರವರ ವಿಭಾಗಗಳಲ್ಲಿ ಸ್ಪರ್ಧೆಯನ್ನು ಕಡಿಮೆ ಸಮಯದಲ್ಲಿ ಪೂರೈಸಿದವರಿಗೆ ಬಹುಮಾನ ಕೊಡಲಾಗುವುದು. ಪ್ರಥಮ 30 ಸಾವಿರ, ದ್ವಿತೀಯ 20, ತೃತೀಯ ಸ್ಥಾನಕ್ಕೆ 10 ಸಾವಿರ ನೀಡಲಿದೆ.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಮಾರ್ಟಿನ್ ವಿಂದ್ಯಾ ವರ್ಮ, ಖಜಾಂಚಿ ಡಾ.ರಾಹುಲ್ ಎಂ.ಪಿ, ಸಂತೋಷ್ ಮಾರ್ಟಿನ್, ವಿಜಾಯಾನಂದ್ ರಾಖೀಶ್, ದರ್ಶನ್ ಚೌದರಿ ಮೊದಲಾದವರು ಇದ್ದರು.

# ಮೇಯರ್ ಗಾದೆಪ್ಪ ಪದಗ್ರಹಣ



**ಬಳ್ಳಾರಿ, ನ.24–** ನಗರದ ನೂತನ ಮೇಯರ್ ಪಿ.ಗಾದೆಪ್ಪ ಅವರು ಇಂದು ಪಾಲಿಕೆಯ ಮೇಯರ್ ಕೊಠಡಿಯಲ್ಲಿ ಪೂಜೆ ಸಲ್ಲಿಸುವ ಮೂಲಕ ಪದಗ್ರಹಣ ಮಾಡಿದ್ದಾರೆ.

ಈ ತಿಂಗಳ15 ರಂದು ನಡೆದ ಚುನಾವಣೆಯಲ್ಲಿ ಪಕ್ಷದ ತೀರ್ಮಾನದಂತೆ ಗಾದೆಪ್ಪ ಅವರು ಬಿಜೆಪಿ ಅಭ್ಯರ್ಥಿ ಕೋನಂಕಿ ತಿಲಕ್ ವಿರುದ್ಧ ಭರ್ಜರಿ ಜಯ ಸಾಧಿಸಿದ್ದರು. ಗಾದೆಪ್ಪ ಅವರು 23 ನೇ ವಾರ್ಡಿನ ಸದಸ್ಯರಾಗಿದ್ದರು. ಪಾಲಿಕೆಯ ಸಭಾ ನಾಯಕರಾಗಿದ್ದರು. ಹಾಲಿ ಕೃಷಿಕ ಸಮಾಜದ ಜಿಲ್ಲಾ ಅಧ್ಯಕ್ಷರೂ ಸಹ ಆಗಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿರುವ ಗಾದೆಪ್ಪ ಸದಾ ಪಕ್ಷದ ನಿಷ್ಠಾವಂತರಾಗಿ ಬೆಳೆದು ಬಂದಿದ್ದಾರೆ.ನಗರದ ಆರಾಧ್ಯ ದೇವತೆ ಕನಕ ದುರ್ಗಮ್ಮ ದೇವಸ್ಥಾನದ ಪೂಜಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ನಗರದ ಕಲ್ಯಾಣ ಸ್ವಾಮಿ ಮಠದ ಶ್ರೀಗಳ ಸಮ್ಮುಖದಲ್ಲಿ ಪದ್ರಗಹಣ ಮಾಡಿದರು. ಈ ವೇಳೆ ನಗರದ ಅನೇಕ ಗಣ್ಯರು, ಪಾಲಿಕೆಯ ಆಯುಕ್ತ ಪಿ.ಎಸ್.ಮಜುನಾಥ, ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ನೂತನ ಮೇಯರ್ ಅವರಿಗೆ ಶುಭಕೋರಿದರು.

